ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ. ಸಿ. ಸಂಖ್ಯೆ: 747/23**

ಪಿಡಬ್ಲ್ಯು: - 1

ದಿನಾಂಕ:09.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ. ಕೆ ಹೆಚ್ ವಿ ರವರಿಂದ:-

ನಾನು 2022 ರಿಂದ ಇಲ್ಲಿಯವರೆಗೆ ಕಾಫಿ ಹಾಗೂ ಕರಿಮೆಣಸು ವ್ಯಾಪಾರ ಮಾಡುತ್ತಿದ್ದೇನೆ. ದಿ: 07.05.2022 ರಿಂದ ಸೆಪ್ಟೆಂಬರ್ -2022 ರವರೆಗೂ ನಾನು ಆರೋಪಿಗೆ ಕರಿಮೆಣಸು ಮಾರಾಟ ಮಾಡಿರುತ್ತೇನೆ. ನಾನು ನನ್ನ ಸದರಿ ವ್ಯವಹಾರವನ್ನು ಸೋಮವಾರಪೇಟೆಯ ಚೌಡ್ಲು ಗ್ರಾಮ ಪಂಚಾಯತಿಯಲ್ಲಿ ನೋಂದಾಯಿಸಿಕೊಂಡಿದ್ದೇನೆ. ನನ್ನ ಸಂಸ್ಥೆಯ ಹೆಸರು ಶ್ರೀ ವೀರಭದ್ರೇಶ್ವರ ಕಾಫಿ ಲಿಂಕ್ಸ್. ನನ್ನ ಸದರಿ ಸಂಸ್ಥೆಯ ನೋಂದಾಯಿತ ಆಗಿರುವುದಕ್ಕೆ ದಾಖಲೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಸಾಮಾನ್ಯವಾಗಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕರೆಂಟ್ ಅಕೌಂಟನ್ನು ತೆರೆಯಬೇಕಾಗುತ್ತದೆ ಎಂದರೆ ಸರಿ. ನನ್ನ ಸದರಿ ಸಂಸ್ಥೆಯ ಬಾಪ್ತು ಕರೆಂಟ್ ಅಕೌಂಟ್ ಇದೆ. ಆರೋಪಿಯೊಂದಿಗೆ ಮಾಡಿದ್ದೇನೆ ಎನ್ನುವ ವ್ಯವಹಾರ ಕರೆಂಟ್ ಅಕೌಂಟ್ ಮುಖಾಂತರ ಆಗಿದೆಯಾ ಎಂದರೆ ಸಾಕ್ಷಿ ಹೌದು ಆಗಿದೆ ಎನ್ನುತ್ತಾರೆ. ಮೇಲೆ ಹೇಳಿದ ಅವಧಿ ಹೊರತು ಪಡಿಸಿ ನಾನು ಆರೋಪಿಯ ಜೊತೆ ಮತ್ತೆ ಎಂದೂ ವ್ಯವಹಾರ ಮಾಡಿಲ್ಲ. ನಾನು ಆರೋಪಿಗೆ ಕರಿಮೆಣಸನ್ನು ಮಾತ್ರ ಮಾರಾಟ ಮಾಡಿದ್ದೇನೆ. ಆರೋಪಿಯ ಸಂಸ್ಥೆ ನೋಂದಾಯಿತವಾಗಿದೆಯಾ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಕರಿಮೆಣಸನ್ನು ಪೂರೈಸಿದ ಬಗ್ಗೆ ನನ್ನ ಬಳಿ ಬರವಣಿಗೆಯಲ್ಲಿರುವ ದಾಖಲೆಗಳು ಇವೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ರೈತರಿಂದ ಖರೀದಿ ಮಾಡಿದ ಕರಿಮೆಣಸನ್ನು ನಾನು ಆರೋಪಿಗೆ ಪೂರೈಸಿದ್ದೇನೆ. ನಾನು ರೈತರಿಂದ ಕರಿಮೆಣಸನ್ನು ಖರೀದಿ ಮಾಡುವಾಗ ಪೇಮೆಂಟ್ ಶೀಟ್ ಇರುತ್ತದೆ, ಅದರಲ್ಲಿ ರೈತನ ಹೆಸರು, ಫೋನ್ ನಂಬರ್, ಖರೀದಿ ಮಾಡಿದ ತೂಕ ಮತ್ತು ಬೆಲೆ ನಮೂದು ಆಗಿರುತ್ತದೆ ಎಂದರೆ ಸರಿ. ನಾನು ಖರೀದಿ ಮಾಡಿದ ಮೇಲೆ ಕ್ಯಾಷ್ ಬಿಲ್ಲನ್ನು ತಯಾರು ಮಾಡುತ್ತೇನೆ. ರೈತರಿಂದ ನಾನು ಕರಿಮೆಣಸನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನೀವು ಆರೋಪಿಗೆ

ಕರಿಮೆಣಸನ್ನು ಪೂರೈಕೆ ಮಾಡುವಾಗ ಜೆ ಸ್ಲಿಪ್ ಹಾಕಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೌದು ಬಿಲ್ ಹಾಕಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ಜೆ ಸ್ಲಿಪ್ ನಲ್ಲಿ ನಾವು ಯಾರಿಗೆ ಮಾರಾಟ ಮಾಡುತ್ತಿದ್ದೇವೆ, ಅವರ ಹೆಸರು, ಮೊಬೈಲ್ ನಂಬರ್, ವಿಳಾಸ, ಪದಾರ್ಥಗಳ ತೂಕ, ಬೆಲೆ, ಲಾರಿ ನಂಬರ್, ಚಾಲಕನ ಹೆಸರು ಎಲ್ಲವೂ ನಮೂದಾಗಿರುತ್ತದೆ ಎಂದರೆ ಸರಿ. ತೆರಿಗೆ ಪಾವತಿ ಮಾಡುವ ಉದ್ದೇಶದಿಂದ ಸದರಿ ದಾಖಲೆಗಳನ್ನು ನಾವು ಶೇಖರಿಸಬೇಕಾಗುತ್ತದೆ ಎಂದರೆ ಸರಿ. ಆ ರೀತಿ ಜೆ ಸ್ಲಿಪ್ಪನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ದಿಃ 07.05.2022 ರಿಂದ 24.09.2022 ರವರೆಗೆ ನಾನು ಆರೋಪಿಗೆ 50 ಟನ್ ಕರಿಮೆಣಸನ್ನು ಪೂರೈಸಿದ್ದೇನೆ. ಯಾವ ಯಾವ ದಿನಾಂಕದಂದು ಎಷ್ಟು ಕರಿಮೆಣಸು ಪೂರೈಸಿದ್ದೀರಿ ಎಂದು ಹೇಳಬಲ್ಲಿರಾ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ದಿನಾಂಕ ಹೇಳಲು ಈಗ ನನಗೆ ನೆನಪಿಲ್ಲ, ಆದರೆ ನನ್ನ ಬಳಿ ಆರೋಪಿಗೆ 50 ಟನ್ ಪೂರೈಸಿದ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಒಂದು ಕೆ. ಜಿ. ಗೆ ರೂ.505/-ರಂತೆ ಬೆಲೆ ನಿಗಧಿ ಪಡಿಸಿ ನಾನು ಆರೋಪಿಗೆ 50 ಟನ್ ಕರಿಮೆಣಸು ಪೂರೈಸಿದ್ದೇನೆ. 50 ಟನ್ ಕರಿಮೆಣಸಿಗೆ ಒಟ್ಟು ಎಷ್ಟು ಹಣ ಆಗಿತ್ತು ಎಂದು ನಾನು ಈಗಿಂದೀಗಲೇ ಲೆಕ್ಕ ಮಾಡಿ ಹೇಳಲು ಆಗುವುದಿಲ್ಲ. ನಾನು ಮೋಸದಿಂದ ಆರೋಪಿಯಿಂದ ಹಣ ಕ್ಲೇಮ್ ಮಾಡುತ್ತಿರುವುದರಿಂದ ನನಗೆ ಲೆಕ್ಕ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿಗೆ 50 ಟನ್ ಕರಿಮೆಣಸು ಪೂರೈಸಿದ ಬಾಪ್ತು ನಿಮಗೆ ಆರೋಪಿಯಿಂದ ಎಷ್ಟು ಹಣ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅದನ್ನು ದಾಖಲೆ ನೋಡಿ ಹೇಳಬೇಕು ಎನ್ನುತ್ತಾರೆ.

(ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.